ಮುಟ್ಟಿ ನೋಡಿದ್ರು ಇಂಜೆಕ್ಷನ್ ಕ್ವಟ್ರು. ಇದು ಅಳ್ತು. ಅಮ್ಯಾಲೆ ಸುಧಾ ಯಾಕ ಕೆಮ್ಮು ಕನಿ ಡಾಕ್ಟ್ರೇ ಅಂದ್ಲು. ಆಕಿಗೂ ಮಾತ್ರಿ ಕ್ವಟ್ರು. ಸೀದಾ ಬಂದ್ ನೋಡಿದ್ರೆ ಆಟೋ ಪಾಟೋ ಜೀಪು ಗೀಪು ಎಂತವೂ ಬರ್ಲುಲ್ಲಾ ಕನಿ ಅಮ್ಮ ಸ್ಟ್ಯಾಂಡ್‌ಗೆ. ಐದ್ ನಿಮಿಸ ನಿಂತು. ಅತ್ಲಗೆ ದೇವ್ರ ಮ್ಯಾಲೆ ಭಾರ ಹಾಕಿ. ಪಾಪಿ ಮಕ್ಕಳಿಗೆ ಪರಮೇಸ್ವರನೇ ಕಾವ್ಲು ಅಂದಕ್ಕಂದು ಸುಮ್ನೆ ಕ್ವಡಿ ಹಚ್ಚಿಗಿಂದು ನಡಕುಂದು ಬಂದು ಕನಿ ಅಮ್ಮ. ಅಪ್ಪಾ ಸ್ವಾಮಿ ನಿಮ್ಮನಿ ಕಾಪಿ ಕುಡ್ದು ಜೀವ ಒಳ್ಳೆ ಬೆಚ್ಚಗಾತು. ನಾಕು ಮಾತಾಡ್ದಂಗು ಆತು' ಅಂದಳು ಗಂಗಮ್ಮ.

'ಒಳ್ಳೆದಾಯ್ತು ಸುಧಾ ಬಸರಿ ಅಂತ ಗೊತ್ತುತ್ತು. ಹೆರಿಗೆ ಆಗಿರದು ಗೊತ್ತರ್ಲುಲ್ಲ. ಗ್ವಂಬಿ ಬಂಗಾರ್ದಂಗೆ ಹುಟ್ಟದೆ, ಏನ ಸ್ವಾಮಿ? ಯಾರ್ಮನಿಗೆ ಬಂದ್ರಿ? ನಿಮ್ಮ ಹೆಸರೇನು?' ಅಂತ ಅಮ್ಮ ಮಗುವಿನ ಮುಖ ಸವರಿದಾಗ, ಗಂಗಮ್ಮ, 'ಅಜ್ಜಿ ಮನಿಗೆ ಬಂದಿನಿ ನನ್ನ ಹೆಸರು ಗನಿಕಾ ಅಂತ ಹೇಳು ಮಗನೆ' ಅಂದಳು. ಮಗಿನ ಹೆಸರು ಕೇಳಿದ ಅಮ್ಮ, ಆ ಹೆಸರು 'ಗ' ಅಕ್ಷರದಿಂದ ಶುರುವಾಗಿದ್ದಕ್ಕೋ ಏನೋ, 'ತಥ್ ಅದೆಂತ ಹೆಸರ ಮರಾಗಿತ್ತಿ ಯಾರು ಕಟ್ಟಿದರು' ಅಂತ ಸಿಡುಕಿ ಕೇಳಿದಾಗ ಬೆಂಕಿ ಕಾಯಿಸುತ್ತಾ ಕುಳಿತಿದ್ದ ಸುಧಾ, 'ನಾನೇ ಕಟ್ಟದೆ. ನನಗೆ ಬಹಳ ಇಷ್ಟದ ಹೆಸರು ಕನಮ್ಮ' ಅಂದಳು. 'ಮಗಿನ ಅಪ್ಪ ಬಂದುದ್ರಾ?' ಅಮ್ಮ ಕೇಳಿತು. 'ಅಯ್ಯೋ ಬಂದು ಹ್ವಾದ ಕನಿ ಅಮ್ಮ ಮೂಸ್ಲಂಡಿ ಮಾತು ಇಲ್ಲ ಕಥಿಯೂ ಇಲ್ಲ. ಬಂದ ಉಂಡ ಹ್ವಾದ. ಕಷ್ಟಕ್ಕೂ ಇಲ್ಲ ಸುಖಕ್ಕೂ ಇಲ್ಲ. ಗುಮ್ಮನಗುಸಗ ಗುಮ್ಮನಂಗೆ ಕಣ್ಣು ಮುಚ್ಚಿಗಿಂದು ಕೂರ್ತನೆ. ಎಂತ ಮಾಡದು, ಓದ್ಯನೆ ಬರ್ದನೆ ಅಂತ ಮದುವಿ ಮಾಡಿದ್ರು. ಈಗ ನೋಡಿದ್ರೆ ಗುಮ್ಮ ಆಡ್ದಂಗೆ ಆಡ್ತನೆ' ಅಂದರು ಗಂಗಮ್ಮ. ಅಷ್ಟರಲ್ಲಿ ಗುಮ್ಮ ಕೂಗತೊಡಗಿತು. 'ಓ ಅಮ್ಮಾ ಗುಮ್ಮ ಕೂಗ್ತದಲಿ ಅದರ ಸಾವೇಳ ಅದರ ಸೊಲ್ಲು ಅಡಗ. ಏನೋ ಕೆಟ್ಟದ್ದು ಕಾದಿದೆ. ಅಪಸಕುನ ಸಿಕ್ಕರು ಗುಮ್ಮ ಹ್ಯಂಗೆ 'ಸಿಕ್ಕಿದ್ರುಸಿಕ್ಕಿದ್ರು' ಅಂತ ಕೂಗ್ತದೆ. ಎಲ್ಲೋ ಸಾವು ಕನಿ. ಹುಚ್ಚೇಗೌಡ್ರು ಸಾಯ ಮುನ್ನ ದಿನ ಚಕ್ಕರ್ ಗುಮ್ಮ ಕೂಗಿತ್ತು. ಮಲ್ಲೇಗೌಡ್ರು ಸತ್ತಾಗ್ಲೂ ಗುಮ್ಮ ಕೂಗಿತ್ತು. ಅವ್ರ ಸುದ್ದಿ ಬುಡಿ. ನಮ್ಮ ದೊಡ್ಡಯ್ಯ ಸತ್ತಾಗ್ಲೂ ಗುಮ್ಮ ಕೂಗಿತ್ತು.' ಗಂಗಮ್ಮನ ಬಾಯಿಂದ ಗುಮ್ಮ ಕೂಗಿ ಸತ್ತವರ ಸಂಖ್ಯೆ ಹೆಚ್ಚುತ್ತಲೇ ಹೋದಾಗ, 'ಅಮ್ಮಾ ಸುಮ್ಮನಿರು ಏನ್ ಚಂದ ಅಂತ ಮಾತಾಡ್ತಿಯ. ಕಾಗೆ ಮಾವಿನ ಮರದ ಮ್ಯಾಲೆ ಕೂರ್ತು, ಮಾವಿನಕಾಯಿ ಬಿತ್ತು ಅನ್ನಂಗೆ ಮಾತಾಡ್ತಿಯಲಮ್ಮ ಸುಮ್ಮನಿರು ಅಂದಳು' ಸುಧಾ.

ಸ್ವಲ್ಪ ಹೊತ್ತು ಅದೂ ಇದು ಕಷ್ಟ-ಸುಖದ ಮಾತಾಡಿದ ನಂತರ, 'ಅಮ್ಮಾ ಮಳಿ ಕಡಿಮಿ ಆಯ್ತು ಕನಿ ನಾವಿನ್ನು ಮೆಲ್ಲಕೆ ಹೆಜ್ಜಿ ಹಾಕ್ತಿವಿ ಸುಮಾರ್ ದೂರ ನಡಿಬಕು' ಅಂದರು ಗಂಗಮ್ಮ. 'ಹೂಂ ಕನ ಮಳಿ ಕಮ್ಮಿ ಆಯ್ತು ತಡಿ, ಬಂದೆ' ಎನ್ನುತ್ತಾ ಅಡುಗೆ ಮನೆಗೆ ಹೋಗಿ ಮತ್ತೊಂದು ಸಲ ಬಿಸಿಬಿಸಿ ಕಾಫಿ ಮಾಡಿ ತಂದು ಅವರಿಬ್ಬರಿಗೂ ಕುಡಿಸಿ. ಮಗುವಿನ ಕೈಗೆ ಐವತ್ತು ರೂಪಾಯಿ ಕೊಟ್ಟು ಆ ವೇಳೆಗೆ ಸರಿಯಾಗಿ ಹಾನುಬಾಳು ಕಡೆಯಿಂದ ಬಂದ ಜೀಪಿಗೆ ಅವರಿಬ್ಬರನ್ನು ಹತ್ತಿಸಿ ಕೂರಿಸಿ ಹತ್ತು ರೂಪಾಯಿಯನ್ನು ಡ್ರೈವರ್ ಕೈ ಕೊಟ್ಟದ್ದು, ಮುಂದೊಂದು ದಿನ ಆ ಮಗು ಅದರ ಅಜ್ಜನ ಹೆಗಲಮೇಲೆ ಕುಳಿತು ಹಾನುಬಾಳು ಸಂತೆಗೆ ಹೋಗುತ್ತಿದ್ದಾಗ ನಮ್ಮ ಅಮ್ಮ ರೋಡಿಗೆ ಓಡಿ ಹೋಗಿ ಅದರ ಮುಖ ಸವರಿ ಜುಟ್ಟಿಗೆ ಪುಟಾಣಿ ಸೇವಂತಿಗೆ ಹೂ ಮುಡಿಸಿದ್ದು ಇವತ್ತಿಗೂ ನೆಂಪಿದೆ. ಗುಡುಗು, ಸಿಡಿಲಿನ ಸುರಿ ಮಳೆಯಲ್ಲಿ ಸುಧಾ ಮತ್ತು ಗಂಗಮ್ಮ ಒಂದು ಸಣ್ಣ ಕೊಡೆ ಹಿಡಿದುಕೊಂಡು ನೆನೆಯುತ್ತಾ 'ಅಮ್ಮಾ ಅಮ್ಮಾ' ಅಂತ ಕರೆಯುತ್ತಾ ನಡೆದು ಬಂದದ್ದು ನನಗೆ ನಿತ್ಯ ನೆನಪಾಗುತ್ತದೆ. ನಿಜ ಹೇಳಬೇಕೆಂದರೆ ಹಳೆಯ ಬಟ್ಟೆಯಲ್ಲಿ ಸುತ್ತಿ ಎದೆಗೆ ಅವುಚಿಕೊಂಡಿದ್ದ ಮಗು ಮಾತ್ರ ಬೆಚ್ಚಗಿತ್ತು. ಒಂದು ಹನಿ ಮಳೆ ನೀರು ಅದರ ಮೈಮೇಲೆ ಬೀಳದಂತೆ ಎಚ್ಚರ ವಹಿಸಿದ್ದರು. ಅವತ್ತು ನಾನು ಕಂಡದ್ದು ಮೂವರು ಅಮ್ಮಂದಿರನ್ನ.

ನಿಸರ್ಗವೆಂಬ ಅದ್ಭುತ ಕಲಾಕೃತಿಯ ಅರಿವು ನಮ್ಮ ಪುಟ್ಟ ವಯಸ್ಸಿಗೆ ಅಂದು ಹೇಗೆ ಅರ್ಥವಾಗಲು ಸಾಧ್ಯ? ಬಾಲ್ಯ ಕಳೆದು ವಿದ್ಯಾಭ್ಯಾಸ, ಉದ್ಯೋಗ, ವಿವಾಹ ಅಂತ ಮನೆಯಿಂದ ಹೊರ ಪ್ರಪಂಚಕ್ಕೆ ಕಾಲಿಟ್ಟು ಬದುಕಿನ ಅನಿವಾರ್ಯತೆಗಳಿಗೆ ಹೊಂದಿಕೊಳ್ಳುತ್ತಾ ಜನ್ಮ ಸವೆಸುವಾಗ, ನಮ್ಮೂರಿನ ಮಳೆಗಾಲ ಮಳೆ ಗುಡುಗು, ಮಿಂಚು ಸಿಡಿಲಿನ ಅಬ್ಬರಕ್ಕೆ ನಾವೆಲ್ಲಾ ಮನೆ